ಕರ್ನಾಟಕ ಸರ್ಕಾರ

ನೋಂದಾಯಿತ ಅಂಚೆ, ಸ್ವೀಕೃತಿ ಬಾಕಿ

ಸಂಖ್ಯೆ: ಅಪಜೀ 09 ಎಫ್‌ಎಲ್‌ಎಲ್ 2017

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 13-06-2019

ಇವರಿಂದ:

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

ಇವರಿಗೆ:

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು),**
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

ಮಾನ್ಯರೆ,

**ವಿಷಯ:** ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ (ಹುಣಸೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕು) ಕೆಲವೊಂದು ಹಾಡಿಗಳಿಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸೋಲಾರ್ ವಿದ್ಯುಚ್ಛಕ್ತಿಯನ್ನು ವಿತರಿಸುವ ಸಂಬಂಧ ಸ್ವೀಕೃತವಾಗಿರುವ ಪ್ರಸ್ತಾವನೆಗಳಿಗೆ ಸೂಕ್ತ ಕ್ರಮವಹಿಸುವ ಬಗ್ಗೆ.

**ಉಲ್ಲೇಖ:** ತಮ್ಮ ಕಚೇರಿಯ ಪತ್ರಗಳು, ಸಂಖ್ಯೆ:

1. A5(3).GFL.CR.32/2015-16, ದಿನಾಂಕ: 16-12-2016. (Halekere Hadi Hamlet)
2. A5(6).GFL.CR.49/2015-16, ದಿನಾಂಕ: 01-03-2017. (Keredibba Hamlet)
3. A5(6).GFL.CR.53/2015-16, ದಿನಾಂಕ: 30-03-2017. (Bedaguli, Ramaiahnapodu and Marigudipodu)
4. A5(6).GFL.CR.46/2015-16, ದಿನಾಂಕ: 01-03-2017. (Purapipodu Hamlet)
5. A5(6).GFL.CR.44/2015-16, ದಿನಾಂಕ: 15-02-2017. (Palar Hamlet)

ಸರ್ಕಾರಿ ಪತ್ರಗಳು, ಸಂಖ್ಯೆ:

6. FEE 09 FLL 2017, ದಿನಾಂಕ: 14-03-2017. (Halekere Hadi Hamlet)
7. FEE 43 FLL 2017, ದಿನಾಂಕ: 04-07-2017. (Keredibba Hamlet)
8. FEE 56 FLL 2017, ದಿನಾಂಕ: 04-07-2017. (Bedaguli, Ramaiahnapodu and Marigudipodu)
9. FEE 44 FLL 2017, ದಿನಾಂಕ: 04-07-2017. (Purapipodu Hamlet)
10. FEE 50 FLL 2017, ದಿನಾಂಕ: 04-07-2017. (Palar Hamlet)

Issue: Dated: 15/6/19

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳತ್ತ ಗಮನ ಸೆಳೆಯಲಾಗಿದೆ. ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ (ಹುಣಸೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕು) ಕೆಲವೊಂದು ಹಾಡಿಗಳಿಗೆ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸೋಲಾರ್ ವಿದ್ಯುಚ್ಛಕ್ತಿಯನ್ನು ವಿತರಿಸುವ ವಿಷಯವಾಗಿ ಉಲ್ಲೇಖಿತ (1)–(5)ರ ಪತ್ರಗಳ ಮೂಲಕ ಸ್ವೀಕೃತವಾಗಿದ್ದ ಪ್ರಸ್ತಾವನೆಗಳಿಗೆ ಉಲ್ಲೇಖಿತ (6)–(10)ರ ಪತ್ರಗಳ ಮೂಲಕ ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರಡಿ ಕಲ್ಪಿಸಿಕೊಳ್ಳಲಾಗಿರುವ ಅವಕಾಶಗಳನ್ವಯ ಅನುಮತಿಯನ್ನು ನೀಡಲಾಗಿತ್ತು.

ಪ್ರಸ್ತುತ ಈ ಅನುಮತಿಯನ್ನು ಅನುಸರಿಸಿ ಉಪಯೋಗಿ ಸಂಸ್ಥೆಯು ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ ಮಾಹಿತಿಯನ್ನು **ಮರುಟಪಾಲಿನಲ್ಲಿಯೇ** ಸಲ್ಲಿಸುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

13/6/2019

(ಅರ್ಚನ ಎಂ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಅರಣ್ಯ-ಸಿ)

13/06/19

ಕರ್ನಾಟಕ ಸರ್ಕಾರ

ನೋಂದಾಯಿತ ಅಂಚೆ, ಸ್ವೀಕೃತಿ ಬಾಕಿ

ಸಂಖ್ಯೆ: **ಅಪಜೀ 122 ಎಫ್‌ಎಲ್‌ಎಲ್ 2016**

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: **21-06-2019**

**ಇವರಿಂದ:**

**ಜರೂರು**

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

**ಇವರಿಗೆ:**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು),**
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

**ಮಾನ್ಯರೆ,**

**ವಿಷಯ:** ನಾಗರಹೊಳೆ ಹುಲಿ ಅಭಯಾರಣ್ಯದ ವ್ಯಾಪ್ತಿಯಲ್ಲಿರುವ 13 ಗ್ರಾಮ/ಹಾಡಿಗಳಿಗೆ ಸೌರ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ.

**ಉಲ್ಲೇಖ:** ತಮ್ಮ ಕಚೇರಿಯ ಪತ್ರಗಳು, ಸಂಖ್ಯೆ:

(1) A5(3).GFL.CR.30/2015-16, ದಿನಾಂಕ: 07-12-2016 (ಮೂಲೆಯೂರು ಹಾಡಿ)

(2) A5(3).GFL.CR.26/2015-16, ದಿನಾಂಕ: 07-12-2016 (ಬಾವಲಿಗದ್ದೆ ಹಾಡಿ)

(3) A5(3).GFL.CR.31/2015-16, ದಿನಾಂಕ: 07-12-2016 (ತಿಮ್ಮನಹೊಸಹಳ್ಳಿ ಹಾಡಿ)

(4) A5(3).GFL.CR.27/2015-16, ದಿನಾಂಕ: 07-12-2016 (ಗೋಳೂರು ಹಾಡಿ ಹ್ಯಾಮ್ಲೆಟ್)

(5) A5(3).GFL.CR.29/2015-16, ದಿನಾಂಕ: 07-12-2016 (ಮಣಿಮೊಳೆ ಹಾಡಿ)

(6) A5(3).GFL.CR.32/2015-16, ದಿನಾಂಕ: 07-12-2016 (ಉದ್ದೂರು ಹಾಡಿ ಹ್ಯಾಮ್ಲೆಟ್)

(7) A5(3).GFL.CR.24/2015-16, ದಿನಾಂಕ: 07-12-2016 (ಆನೆಮಲ ಹಾಡಿ ಹ್ಯಾಮ್ಲೆಟ್)

(8) A5(3).GFL.CR.25/2015-16 ದಿನಾಂಕ: 07-12-2016 (ಬಲ್ಲೆ ಹಾಡಿ ಹ್ಯಾಮ್ಲೆಟ್)

(9) A5(6).GFL.CR.51/2015-16, ದಿನಾಂಕ: 16-02-2017 (ನಾಗರಹೊಳೆ ಹ್ಯಾಮ್ಲೆಟ್)

(10) A5(6).GFL.CR.56/2015-16, ದಿನಾಂಕ: 16-02-2017 (ಆನೆಗುಂಡಿ ಹ್ಯಾಮ್ಲೆಟ್)

(11) A5(6).GFL.CR.52/2015-16, ದಿನಾಂಕ: 16-02-2017 (ಗೋಣಿಗದ್ದೆ ಹ್ಯಾಮ್ಲೆಟ್)

(12) A5(6).GFL.CR.54/2015-16, ದಿನಾಂಕ: 16-02-2017 (ಬೇಗೂರು ಹಾಡಿ ಮತ್ತು ಗದ್ದೆ ಹಾಡಿ)

(13) A5(6).GFL.CR.55/2015-16, ದಿನಾಂಕ: 17-02-2017 (ಬೊಮ್ಮಡು ಹಾಡಿ)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರಗಳ ಮೂಲಕ ಸ್ವೀಕೃತವಾಗಿದ್ದ ಪ್ರಸ್ತಾವನೆಗಳಿಗೆ ರಾಜ್ಯ ಸರ್ಕಾರವು ವಿವಿಧ ದಿನಾಂಕಗಳಂದು ಅರಣ್ಯ (ಸಂರಕ್ಷಣೆ) ಕಾಯ್ದೆ, 1980ರಡಿ ಹೊರಡಿಸಲಾಗಿರುವ ಮಾರ್ಗದರ್ಶನಗಳನ್ವಯ ಮೊದಲನೆಯ ಹಂತದ ಅನುಮತಿಯನ್ನು ನೀಡಿತ್ತು.

ಇದೇ ವಿಷಯವಾಗಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯಗಳು ಮತ್ತು ಹವಾಮಾನ ವೈಪರೀತ್ಯ ಮಂತ್ರಾಲಯವು ಪತ್ರ ಸಂಖ್ಯೆ: F(C)A/11.6/327/KAR/1713, ದಿನಾಂಕ: 11–03–2019ರ ಮೂಲಕ ಈ ಪ್ರಸ್ತಾವನೆಗಳಿಗೆ ನೀಡಿರುವ ಅನುಮತಿಯನ್ನು ಹಿಂಪಡೆದು, ತದನಂತರ ಹೊಸದಾಗಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕೋರಿರುತ್ತದೆ (ಪ್ರತಿಯನ್ನು ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ನೀಡಿದ್ದ ಮೊದಲನೆಯ ಹಂತದ ಅನುಮತಿಯನ್ನು ಬಳಕೆ ಮಾಡಿಕೊಂಡು, ಉಪಯೋಗಿ ಸಂಸ್ಥೆಯು ಕಾಮಗಾರಿಯನ್ನು ಪ್ರಾರಂಭಿಸಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ಮರು ಟಪಾಲಿನಲ್ಲಿಯೇ ಒದಗಿಸುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

ಅರ್ಚನ ಎಂ.ಎಸ್. 21/6/2019

(ಅರ್ಚನ ಎಂ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಅರಣ್ಯ-ಸಿ)

21/06/19